# ನಲಿ–ಕಲಿ : ಪರಿಸರ ಅಧ್ಯಯನ

## (ಅ) ಶಿಕ್ಷಕರಿಗೆ ಸೂಚನೆಗಳು :

- ಕೋವಿಡ್–೧೯ ರ ಸಂದಿಗ್ಧ ಸಂದರ್ಭದಲ್ಲಿ ಮಕ್ಕಳು ಶಾಲೆಗೆ ಬರುವ ಪರಿಸ್ಥಿತಿ ಇರುವದಿಲ್ಲ ಕಾರಣ ಮಕ್ಕಳಿಗೆ ಯವುದೇ ರೀತಿಯ ಕಲಿಕಾ ತೊಂದರೆ ಉಂಟಾಗಬಾರದೆಂಬ ಉದ್ದೇಶದಿಂದ ಮನೆಯಲ್ಲಿಯೇ ಸ್ವಯಂ ಕಲಿಕೆಯಾಗಲು ಪಾಲಕರ/ಸ್ವಯಂಸೇವಕರ ನೆರವಿನಿಂದ ಕಲಿಯಲು ಅವಕಾಶ ಕಲ್ಪಿಸಲಾಗಿದೆ.
- ಮಗು ಹಿಂದಿನ ತರಗತಿಯಲ್ಲಿ ಕಲಿಯಬೇಕಾಗಿದ್ದ ಕಲಿಕಾಂಶಗಳನ್ನು ಪಟ್ಟಿ ಮಾಡಿ ನೀಡಲಾಗಿದೆ.
- ಪರಿಸರ ಅಧ್ಯಯನದ ಚಟುವಟಿಕೆಗಳೆಲ್ಲವೂ ಮಗುವಿಗೆ ತೀರ ತನ್ನ ಮನೆಯ /ಸುತ್ತಲಿನ ಅಂಶಗಳನ್ನು ಒಳಗೊಂಡಿರುವದರಿಂದ ಎಲ್ಲಾ ಚಟುವಟಿಕೆಗಳನ್ನು ಉಳಿಸಿಕೊಳ್ಳಲಾಗಿದೆ.
- ಮಕ್ಕಳು ಮಾಡಿ ನೋಡಿ ಕಲಿಯಬೇಕಾಗಿರುವದರಿಂದ ಮಣ್ಣಿನಲ್ಲಿ ಆಟ, ಸರಳ ಪ್ರಯೋಗಗಳನ್ನು ಮಕ್ಕಳಗೆ ಮಾಡಲು ಅವಕಾಶ ನೀಡಿದೆ
- ನಲಿ ಕಲಿ ಭೋದನಾ ಪ್ರಕ್ರಿಯೆಗೆ ಸಂಭಂದಿಸಿದಂತೆ ಪರಿಸರ ಅಧ್ಯಯನ ವಿಷಯದಲ್ಲಿ ಸೇತುಬಂಧ ಯೋಜನೆಯನ್ನು ೬೦ ದಿನಗಳಿಗೆ ನಿಗದಿಗೊಳಿಸಲಾಗಿದೆ.
- ಇದರಲ್ಲಿ ಆರಂಭದ ೧೦ ದಿನಗಳನ್ನು ಪೂರ್ವ ಭಾವಿ ಚಟುವಟಿಕೆಗಳಿಗಾಗಿಯೂ ಹಾಗೂ ಕಲಿಕಾಂಶವನ್ನು ಖಾತರಿ ಪಡಿಸಿಕೊಳ್ಳುವ ಸಲುವಾಗಿ ೫೦ ದಿನದ ವಿನ್ಯಾಸವನ್ನು ಅಳವಡಿಸಲಾಗಿದೆ.
- ೫೦ ದಿನಗಳ ಕಲಿಕೆಯಲ್ಲಿ ನಾಲ್ಕು ಹಂತದಲ್ಲಿ ಶಿಕ್ಷಕರು ಮೌಲ್ಯಮಾಪನ ಮಾಡಿ ಪ್ರತಿ ಮಗು ಕಲಿಕೆಯಲ್ಲಿ ತೊಡಗಿರುವ ಬಗ್ಗೆ ಖಾತರಿ ಪಡಿಸಿಕೊಂಡು ಮುಂದಿನ ಕಲಿಕೆಗೆ ಹೋಗುವಂತೆ ಸೂಚನೆ ನೀಡಲಾಗಿದೆ.
- ಕೋವಿಡ್ ಸಂದಿಗ್ಧ ಸಂದರ್ಭದಲ್ಲಿ ಮಕ್ಕಳು ಸ್ವಯಂ ಕಲಿಕೆಯಲ್ಲಿಯೇ ತೊಡಗುವದರಿಂದ ಹೆಚ್ಚುವರಿಯಾಗಿ ಅಭ್ಯಾಸದ ಹಾಳೆಗಳನ್ನು ನೀಡಲಾಗುತ್ತಿದೆ. ಈ ಅಭ್ಯಾಸದ ಹಾಳೆಗಳನ್ನು ಮಕ್ಕಳು ನಿರ್ವಹಿಸುವಲ್ಲಿ ಪಾಲಕರ / ಸ್ವಯಂಸೇವಕರ ಮಾರ್ಗದರ್ಶನ ಅಥವಾ ಸಲಹೆ ಅಗತ್ಯವಾಗಿದೆ.
- ಹದಿನೈದು ದಿನಗಳ ನಂತರ ಮಕ್ಕಳು ಪೂರೈಸಿದ ಮೌಲ್ಮಾಪನದ ಹಾಳೆಗಳನ್ನು ಶಿಕ್ಷಕರು ಸಂಗ್ರಹಿಸಿ ಅದನ್ನು ಪರಿಶೀಲಿಸಿ ಕಾಯ್ದಿರಿಸುವದು.ಅದರಂತೆ ಮೂವತ್ತುದಿನದ,ನಲವತ್ತೈದು ದಿನದ,ಅರವತ್ತು ದಿನದ ಮೌಲ್ಯಮಾಪನ ಹಾಳೆಗಳ ನಿರ್ವಹಣೆಯನ್ನು ಮಾಡುವದರ ಮೂಲಕ ಮಕ್ಕಳ ಕಲಿಕೆಯನ್ನು ಧೃಡೀಕರಿಸಿಕೊಳ್ಳುವದು.ಹಾಗೂ ಮುಂದಿನ ಕಲಿಕೆಗೆ ಸಹಾಯವಾಗಬಲ್ಲದು.
- ಪಾಲಕರು /ಸ್ವಯಂಸೇವಕರು ಮಕ್ಕಳಿಗೆ ಸೂಕ್ತ ಮಾರ್ಗ ದರ್ಶನ ನೀಡುವ ಸಲುವಾಗಿ ಚಟುವಟಿಕೆಗಳ ನಿರ್ವಹಣೆ ಕುರಿತು ಪಾಲಕರಿಗಾಗಿಯೆ ಪ್ರತ್ಯೇಕ ಸೂಚನೆಗಳನ್ನು ಸಹ ಅಭ್ಯಾಸದ ಹಾಳೆಯಲ್ಲಿ ನೀಡಲಾಗಿದೆ.
- ಹವಾಮಾನದ ಬದಲಾವಣೆಗಳನ್ನು ಗಮನಿಸಿ ಮಕ್ಕಳು ಹವಾಮಾನವನ್ನು ಚಿತ್ರದ ಮೂಲಕ ಗುರುತಿಸಬೇಕು.ಅದಕ್ಕೆ ಪ್ರತ್ಯೇಕವಾದ ಅಭ್ಯಾಸದ ಹಾಳೆಯನ್ನು ನೀಡಲಾಗಿದೆ.

- ಪ್ರತಿಯೊಂದು ಅಭ್ಯಾಸದ ಹಾಳೆಯಲ್ಲೂ ಹೆಚ್ಚುವರಿಯಾಗಿ ಕ್ಯೂಆರ್ ಕೋಡ್ ಗಳನ್ನು ಹಾಗೂ ಬೇರೆ ಬೇರೆ ಲಿಂಕ್ ಗಳನ್ನು ನೀಡಿರುವದರಿಂದ ಅದನ್ನು ಪಾಲಕರು ಹೆಚ್ಚುವರಿಯಾಗಿ ನೀಡಿರುವ ವೀಡಿಯೊ/ಆಡಿಯೊ/ರೇಡಿಯೊ ಪಾಠಗಳನ್ನು ನೋಡಲು/ಕೇಳಲು ಅನುಕೂಲವಾಗುವದು.
- ಚಿತ್ರಕ್ಕೆ ಬಣ್ಣ ಹಾಕುವದು,ಮಣ್ಣಿನ ಮಾದರಿ ಮಾಡುವದು, ಗೆರೆ ಎಳೆದು ಹೊಂದಿಸುವದು,ಚಿತ್ರ ನೋಡಿ ಉತ್ತರ ಬರೆಯುವದು ಮುಂತಾದ ಚಟುವಟಿಕೆಗಳಿರುವದರಿಂದ ಮಕ್ಕಳು ಸ್ವಯಂಕಲಿಕೆ ಮಾಡಿಕೊಳ್ಳಲು ಸಹಾಯಕವಾಗುತ್ತದೆ.
- ಚಿಕ್ಕ ಚಿಕ್ಕ ಪ್ರಯೋಗಗಳನ್ನು ಮಕ್ಕಳಿಗೆ ತೋರಿಸಲು ವೀಡಿಯೊಗಳನ್ನು ಮಾಡಿ ತೋರಿಸುವ ಪ್ರಯತ್ನ ಮಾಡಲಾಗಿದೆ.ಅದನ್ನು ನೋಡಿ ತಾವೂ ಪ್ರಯೋಗ ಮಾಡಲು ಮಕ್ಕಳು ಆಶಿಸಿದಲ್ಲಿ ಪಾಲಕರೇ ಜವಾಬ್ದಾರಿಯಿಂದ ಪ್ರಯೋಗಗಳನ್ನು ತಮ್ಮ ಸಮ್ಮುಖದಲ್ಲಿಯೇ ಮಾಡಿಸುವ ಪ್ರಯತ್ನ ಮಾಡಬೇಕಿದೆ.
- ಮಕ್ಕಳಲ್ಲಿ ಸುಪ್ತವಾಗಿ ಅಡಗಿರುವ ಸೃಜನಶೀಲತೆಯನ್ನು ಗುರ್ತಿಸಲು ಒರೆಗಾಮಿ,ಸರಳ ಕ್ರಾಫ್ಟ್ ಗಳನ್ನು ಸಹನೀಡಲಾಗಿದೆ ಅದನ್ನು ನಿರ್ವಹಿಸುವ ಸಲುವಾಗಿ ಸ್ಪಷ್ಟ ಸೂಚನೆಗಳನ್ನು ಸಹ ನೀಡಲಾಗಿದೆ ಅದರಂತೆ ಪಾಲಕರು /ಸ್ವಯಂಸೇವಕರು ಕಾರ್ಯ ಮಾಡುವದು.ಇದರ ಕುರಿತಾಗಿ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸ್ಥಳೀಯ ಶಿಕ್ಷಕರನ್ನುದೂರವಾಣಿ ಮೂಲಕ ಸಂಪರ್ಕಿಸಬಹುದು

## (ಆ) ಪಾಲಕರಿಗೆ/ಸ್ವಯಂ ಸೇವಕರಿಗೆ ಸೂಚನೆಗಳು :

- ಅಭ್ಯಾಸದ ಹಾಳೆಯಲ್ಲಿರುವ ಚಟುವಟಿಕೆಗಳನ್ನು ಮಕ್ಕಳಿಗೆ ನಿರ್ವಹಿಸಲು ಅವಕಾಶ ನೀಡುವದು.
- ಮಗುವಿನ ತರಗತಿ ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಮಕ್ಕಳ ಕಲಿಕೆ ಕುರಿತು ಚರ್ಚಿಸುವದು.
- ಮಗುವಿನ ಕಲಿಕೆಗೆ ಅಗತ್ಯವಿರುವ ಸಾಮಗ್ರಿಗಳನ್ನು ಒದಗಿಸುವದು.
- ಮನೆಯ ಪರಿಸರದಲ್ಲಿರುವ ವಸ್ತುಗಳನ್ನು ಬಳಸಿ ಮಗುವಿನ ಕಲಿಕೆಗೆ ಅನುವು ಮಾಡಿಕೊಡುವದು.
- ಅಬ್ಯಾಸದ ಹಾಳೆಗಳಲ್ಲಿ ಮಕ್ಕಳಿಗೆ ಅರ್ಥವಾಗುವಂತಹ ಚಟುವಟಿಕೆಗಳನ್ನೇ ನೀಡಲಾಗಿದೆ.ಆದರೂ ಪಾಲಕರಿಗೆ ಸೂಚನೆಗಳನ್ನು ನೀಡಿದೆ.ಅದನ್ನು ನಿರ್ವಹಿಸಲು ಮಕ್ಕಳಿಗೆ ನೆರವಾಗುವದು.
- ದೋಣಿ ತಯಾರಿಕೆ,ಮಣ್ಣಿನ ಮಾದರಿ , ಎಲೆಗಳಿಂದ ಚಿತ್ರತಯಾರಿಸುವ ಚಟುವಟುಕೆಗಳನ್ನು ನೀಡಿದೆಅವುಗಳನ್ನು ಮಾಡಿಸುವದರ ಮೂಲಕ ಮಕ್ಕಳಲ್ಲಿ ಅಡಗಿರುವ ಸೃಜನ ಶೀಲತೆಯನ್ನು ಹೊರಹೊಮ್ಮಿಸಲು ಅವಕಾಶ ನೀಡುವದು.
- ಮಕ್ಕಳನ್ನು ಸದಾ ಚಟುವಟಿಕೆಯಲ್ಲಿ ತೊಡಗಿಸುವ ಸಲುವಾಗಿ ಮಕ್ಕಳಿಗೆ ತುಂಬಾ ಇಷ್ಟವಾಗಿರುವ ಆಟಗಳನ್ನು ಆಡಲು ಪ್ರೋತ್ಸಾಹಿಸುವದು.
- ಕೋವಿಡ್ -೧೯ ರ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಕಲಿಕಾ ಕೊರತೆ ಉಂಟಾಗದಂತೆ ಸಾಮಾಜಿಕ ಅಂತರದೊಂದಿಗೆ ಮನೆಯಲ್ಲಿಯೇ ಇದ್ದು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವ ಮಹತ್ತರ ಜವಾಬ್ದಾರಿ ಎಲ್ಲಾ ಪಾಲಕರದ್ದಾಗಿರುತ್ತದೆ.